**ಸೆಪ್ಟೆಂಬರ್** 2021

## ಮೇಷ



ಕುಟುಂಬದವರಿಂದ, ಅಧಿಕಾರಿಗಳಿಂದ ಸಹಕಾರ ಲಭ್ಯ. ವಿದ್ಯಾರ್ಥಿಗಳಿಗೆ ಪ್ರಗತಿ. ವ್ಯವಹಾರಸ್ಥರಿಗೆ ಯಶಸ್ಸು. ಉದ್ಯೋಗಿಗಳಿಗೆ ಸ್ಥಳ ಬದಲಾವಣೆ. ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳು ಜನಾನುರಾಗ ಗಳಿಸುವರು.

**ಶುಭ:** 10, 18, 22

**ಅಶುಭ:** 12, 16, 24

## ವೃಷಭ



ಸಾಧ್ಯವಾದಷ್ಟು ತಾಳ್ಮೆಯಿಂದ ವರ್ತಿಸಿ. ಬಂಧುಗಳು, ಸ್ನೇಹಿತರು ದೂರ ಸರಿಯುವ ಸಾಧ್ಯತೆ. ಪಾಲುದಾರಿಕೆ ವ್ಯವಹಾರದಲ್ಲಿ ಎಚ್ಚರಿಕೆ ಇರಲಿ. ಸಮಸ್ಯೆಗಳು ಶಾಶ್ವತವಲ್ಲ. ತಿಂಗಳಾಂತ್ಯಕ್ಕೆ ಎಲ್ಲಾ ಪರಿಹಾರವಾಗುತ್ತವೆ.

**ಶುಭ:** 14, 19, 28

**ಅಶುಭ:** 16, 20, 26

## ಮಿಥುನ




ಬೌದ್ಧಿಕ ಚಟುವಟಿಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳುವಿರಿ. ಶೈಕ್ಷಣಿಕ ಕ್ಷೇತ್ರದಲ್ಲಿರುವವರಿಗೆ ಉದ್ಯೋಗದಲ್ಲಿ ಬಡ್ತಿ ಸಾಧ್ಯತೆ. ಕೃಷಿ ಉತ್ಪನ್ನ ಮಾರಾಟಗಾರರಿಗೆ ಉತ್ತಮ. ಆರೋಗ್ಯದ ಬಗ್ಗೆ ಕಾಳಜಿ ಇರಲಿ.

**ಶುಭ:** 14, 16, 22

**ಅಶುಭ:** 11, 17, 26

## ಕರ್ಕಾಟಕ




ಸಂಶಯವು ವಿನಾಶಕ್ಕೆ ಕಾರಣ. ವಿನಾಕಾರಣ ಸಂಶಯದಿಂದ ಮಾನಸಿಕ ನೆಮ್ಮದಿ ಕಳೆದುಕೊಳ್ಳಬೇಡಿ. ವ್ಯವಹಾರದಲ್ಲಿ ನಷ್ಟ, ಕೋರ್ಟ್ ಕೆಲಸಗಳಿಗೆ ವೃಥಾ ಅಲೆದಾಟ. ತಿಂಗಳಾಂತ್ಯಕ್ಕೆ ಸಮಸ್ಯೆಗಳು ಕರಗುವವು.

**ಶುಭ:** 11, 18, 25

**ಅಶುಭ:** 13, 26, 29

## ಸಿಂಹ



ಸಂಪತ್ತನ್ನು ಯೋಗ್ಯ ಮಾರ್ಗದಲ್ಲಿ ಉಪಯೋಗಿಸಿ. ಭೂಮಿ ಖರೀದಿಗೆ ಉತ್ತಮ ಸಮಯ. ನೌಕರರಿಗೆ ಸ್ಥಳ ಬದಲಾವಣೆ ಸಂಭವ. ವಾಹನ, ಯಂತ್ರೋಪಕರಣ, ಕಬ್ಬಿಣ ಉದ್ಯಮದಲ್ಲಿ ಉತ್ತಮ ಲಾಭ ಕಾಣುವಿರಿ.

**ಶುಭ:** 14, 19, 26

**ಅಶುಭ:** 12, 16, 29

## ಕನ್ಯಾ



ತಿಂಗಳ ಪ್ರಾರಂಭದಲ್ಲಿ ಬೇಸರ ಕಾಡಬಹುದು. ಬಂಧುಗಳು ನಿಮ್ಮ ವಿರುದ್ಧ ಪಿತೂರಿ ನಡೆಸಬಹುದು. ಉದ್ಯೋಗದಲ್ಲಿ ಕಿರಿಕಿರಿ, ರಾಜಕಾರಣಿಗಳಿಗೆ ಪ್ರಗತಿ ಕುಂಠಿತ. ಕೆಲಸದಲ್ಲಿ ಆತುರ ಮಾಡಬೇಡಿ.

**ಶುಭ:** 15, 18, 24

**ಅಶುಭ:** 13, 16, 29